ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 12 ]
Total No. of Printed Pages : 12 ]
ಒಟ್ಟು ಪ್ರಶ್ನೆಗಳ ಸಂಖ್ಯೆ : 57 ]
Total No. of Questions : 57 ]

**C**

**ಸಂಕೇತ ಸಂಖ್ಯೆ : 96-K**
**Code No. : 96-K**

**CCE PR**
**NSR & NSPR**

Question Paper Serial No. **100**

# ವಿಷಯ : ಅರ್ಥಶಾಸ್ತ್ರ
# Subject : ECONOMICS

**(ಕನ್ನಡ ಮಾಧ್ಯಮ / Kannada Medium)**

**(ಪುನರಾವರ್ತಿತ ಖಾಸಗಿ ಅಭ್ಯರ್ಥಿ / ಎನ್.ಎಸ್.ಆರ್. & ಎನ್.ಎಸ್.ಪಿ.ಆರ್.)**
**(Private Repeater / NSR & NSPR)**

ದಿನಾಂಕ : 02. 07. 2022 ] [ Date : 02. 07. 2022
ಸಮಯ : ಬೆಳಗ್ಗೆ 9-30 ರಿಂದ ಮಧ್ಯಾಹ್ನ 12-45 ರವರೆಗೆ ] [ Time : 9-30 A.M. to 12-45 P.M.
ಗರಿಷ್ಠ ಅಂಕಗಳು : 100 ] [ Max. Marks : 100

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

1. ಈ ಪ್ರಶ್ನೆಪತ್ರಿಕೆಯು ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಒಟ್ಟು 57 ಪ್ರಶ್ನೆಗಳನ್ನು ಹೊಂದಿದೆ.
2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.
3. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.
5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

ಇಲ್ಲಿಂದ ಕತ್ತರಿಸಿ

**TEAR HERE TO OPEN THE QUESTION PAPER**
**ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ**

**Tear here**

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಬರೆಯಿರಿ : 10 × 1 = 10**

1. "ಆರ್ಥಿಕ ಅಭಿವೃದ್ಧಿಯು ಸುದೀರ್ಘ ಕಾಲದವರೆಗೆ ಒಂದು ದೇಶದ ನೈಜ ಆದಾಯವನ್ನು ಹೆಚ್ಚಳ ಮಾಡುವ ಪ್ರಕ್ರಿಯೆಯಾಗಿದೆ." ಎಂದು ಹೇಳಿದವರು.

   (A) ಮೇಯರ್ ಮತ್ತು ಬಾಲ್ಡ್‌ವಿನ್

   (B) ಬಾಲ್ಡ್‌ವಿನ್ ಮತ್ತು ಮಾರ್ಷಲ್

   (C) ಮೇಯರ್ ಮತ್ತು ಮಾರ್ಷಲ್

   (D) ಕೇನ್ಸ್ ಮತ್ತು ಬಾಲ್ಡ್‌ವಿನ್

2. ಎಲ್ಲಾ ಆರ್ಥಿಕ ಚಟುವಟಿಕೆಗಳ ಜೀವನಾಡಿ

   (A) ವಿನಿಮಯ

   (B) ತುಷ್ಟಿಗುಣ

   (C) ಉತ್ಪಾದನೆ

   (D) ಹಣಕಾಸು

3. ಸಹಕಾರಿ ಪತ್ತಿನ ಸಂಘಗಳು ಕಾರ್ಯನಿರ್ವಹಿಸುವುದು

(A) ಸಹ ಸಂಬಂಧದ ಆಧಾರದ ಮೇಲೆ

(B) ಸಹಕಾರಿ ತತ್ವದ ಆಧಾರದ ಮೇಲೆ

(C) ಸಹ ಸಂಗತಿಯ ಆಧಾರದ ಮೇಲೆ

(D) ಸಹ ಬೇಡಿಕೆಯ ಆಧಾರದ ಮೇಲೆ

4. "ಕೈಗಾರೀಕರಣಗೊಳಿಸಿ ಇಲ್ಲವೇ ವಿನಾಶವಾಗಿ" ಎಂದು ಹೇಳಿದವರು

(A) ಜೆ.ಎನ್. ಟಾಟಾ

(B) ಮಹಾತ್ಮ ಗಾಂಧಿ

(C) ಸರ್ ಎಂ. ವಿಶ್ವೇಶ್ವರಯ್ಯ

(D) ಜವಾಹರಲಾಲ್ ನೆಹರೂ

5. ರಾಷ್ಟ್ರೀಯ ಕೈಗಾರಿಕೆಗಳ ನಿಗಮದ ಉದ್ದೇಶ

(A) ಹಣಕಾಸು ಪೂರೈಸುವುದು

(B) ಯಂತ್ರೋಪಕರಣಗಳನ್ನು ಪೂರೈಸುವುದು

(C) ಕಚ್ಚಾವಸ್ತುಗಳನ್ನು ಪೂರೈಸುವುದು

(D) ಕಾರ್ಮಿಕರನ್ನು ಪೂರೈಸುವುದು

6. ಬಕಿಂಗ್‌ಹ್ಯಾಮ್ ಕಾಲುವೆ ಇರುವುದು

(A) ತಮಿಳುನಾಡಿನಲ್ಲಿ

(B) ಕೇರಳದಲ್ಲಿ

(C) ಮಹಾರಾಷ್ಟ್ರದಲ್ಲಿ

(D) ಕರ್ನಾಟಕದಲ್ಲಿ

7. ಬ್ರಿಟಿಷರು ಭಾರತದಲ್ಲಿ ರೈಲ್ವೆ ಸಾರಿಗೆಯನ್ನು ಅಭಿವೃದ್ಧಿಪಡಿಸಿದ್ದು

(A) ಕಾರ್ಮಿಕರ ಸಾರಿಗೆಯ ಸಲುವಾಗಿ

(B) ವ್ಯಾಪಾರ ಮತ್ತು ಆಡಳಿತದ ಸಲುವಾಗಿ

(C) ಜನರ ಓಡಾಟಕ್ಕಾಗಿ

(D) ಸಾರಿಗೆ ಅಭಿವೃದ್ಧಿಗಾಗಿ

8. ನೋಟು ಚಲಾವಣೆಗೆ ಭಾರತೀಯ ರಿಸರ್ವ್ ಬ್ಯಾಂಕ್ ಅನುಸರಿಸುವ ಪದ್ಧತಿ

(A) ಅಧಿಕ ಮೀಸಲು ಪದ್ಧತಿ

(B) ಸಮಾನ ಮೀಸಲು ಪದ್ಧತಿ

(C) ಇಳಿಮುಖ ಮೀಸಲು ಪದ್ಧತಿ

(D) ಕನಿಷ್ಠ ಮೀಸಲು ಪದ್ಧತಿ

9. ಪ್ರಪಂಚದ ಹಳೆಯ ಕೇಂದ್ರ ಬ್ಯಾಂಕ್

(A) ಸ್ವೀಡನ್‌ನ ರಿಕ್ಸ್ ಬ್ಯಾಂಕ್

(B) ಬ್ಯಾಂಕ್ ಆಫ್ ಫ್ರಾನ್ಸ್

(C) ಬ್ಯಾಂಕ್ ಆಫ್ ಜಪಾನ್

(D) ಬ್ಯಾಂಕ್ ಆಫ್ ಇಂಗ್ಲೆಂಡ್

10. ಇಂಗ್ಲೆಂಡ್‌ನ ಹಣ

(A) ರೂಬಲ್

(B) ಫ್ರಾಂಕ್

(C) ಡಾಲರ್

(D) ಪೌಂಡ್

**II. 11.** ***A*-ಪಟ್ಟಿಯನ್ನು *B*-ಪಟ್ಟಿಯೊಂದಿಗೆ ಹೊಂದಿಸಿ, ಉತ್ತರವನ್ನು ಕ್ರಮಾಕ್ಷರದೊಂದಿಗೆ ಬರೆಯಿರಿ :** **5 × 1 = 5**

| ***A*-ಪಟ್ಟಿ** | ***B*-ಪಟ್ಟಿ** |
|---|---|
| (A) ಉತ್ತರ ರೈಲ್ವೆ | (i) ಜೈಪುರ್ |
| (B) ದಕ್ಷಿಣ ರೈಲ್ವೆ | (ii) ನವ ದೆಹಲಿ |
| (C) ಪೂರ್ವ ರೈಲ್ವೆ | (iii) ಮುಂಬಯಿ |
| (D) ಪಶ್ಚಿಮ ರೈಲ್ವೆ | (iv) ಚೆನ್ನೈ |
| (E) ವಾಯುವ್ಯ ರೈಲ್ವೆ | (v) ಕೊಲ್ಕತ್ತಾ |
| | (vi) ಹುಬ್ಬಳ್ಳಿ |
| | (vii) ಜಬಲ್‌ಪುರ್ |

**III. ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ :** **15 × 1 = 15**

12. ಆರ್ಥಿಕ ಅಭಿವೃದ್ಧಿ ಎಂದರೇನು ?

13. ಅನಭಿವೃದ್ಧಿ ರಾಷ್ಟ್ರಗಳು ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ ಹಿಂದುಳಿದಿವೆ. ಏಕೆ ?

14. ಭಾರತದಲ್ಲಿ ಕೃಷಿ ಹಣಕಾಸಿನ ಅತ್ಯುನ್ನತ ಬ್ಯಾಂಕ್ ಯಾವುದು ?

15. ಪ್ರಾದೇಶಿಕ ಗ್ರಾಮೀಣ ಬ್ಯಾಂಕ್‌ಗಳನ್ನು ಏಕೆ ಸ್ಥಾಪಿಸಲಾಗಿದೆ ?

16. ಹೂಡಿಕೆ ಹಿಂತೆಗೆತ ಎಂದರೇನು ?

17. ಬಡತನ ಎಂದರೇನು ?

18. ನೆಹರು ರೋಜ್‌ಗಾರ್ ಯೋಜನೆಯ ಉದ್ದೇಶವೇನು ?

19. ರಾಷ್ಟ್ರೀಯ ಕೂಲಿಗಾಗಿ ಕಾಳು ಯೋಜನೆಯನ್ನು ಏಕೆ ಆರಂಭಿಸಲಾಗಿದೆ ?

20. ಸಾಪೇಕ್ಷ ಬಡತನ ಎಂದರೇನು ?

21. ಭಾರತದಲ್ಲಿನ ಮುಕ್ತ ವಾಯು ನೀತಿಯ ಪರಿಣಾಮವೇನು ?

22. ಅಂಚೆ ಸೂಚಿ ಸಂಖ್ಯೆಯನ್ನು ಏಕೆ ಜಾರಿಗೆ ತರಲಾಗಿದೆ ?

23. ಕರ್ನಾಟಕದ ಪ್ರಮುಖ ಬಂದರನ್ನು ಹೆಸರಿಸಿ.

24. ಭಾರತೀಯ ರಿಸರ್ವ್ ಬ್ಯಾಂಕಿನ ಪ್ರಧಾನ ಕಛೇರಿ ಎಲ್ಲಿದೆ ?

25. ವ್ಯಾಪಾರ ಎಂದರೇನು ?

26. ವಿದೇಶಿ ವಿನಿಮಯ ದರ ಎಂದರೇನು ?

**IV. ಕೆಳಗಿನ ಪ್ರಶ್ನೆಗಳಿಗೆ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ :**

**24 × 2 = 48**

27. ಮಾನವ ಅಭಿವೃದ್ಧಿ ಸೂಚ್ಯಂಕವನ್ನು ಹೇಗೆ ಅಳೆಯಲಾಗುತ್ತದೆ ?

28. ಬ್ಯಾಂಕ್‌ಗಳ ರಾಷ್ಟ್ರೀಕರಣವು ಭಾರತದ ಆರ್ಥಿಕತೆಗೆ ಹೇಗೆ ಸಹಕಾರಿಯಾಗಿದೆ ?

29. ಮೂಢನಂಬಿಕೆಗಳು ಆರ್ಥಿಕ ಅಭಿವೃದ್ಧಿಗೆ ತೊಡಕಾಗಿವೆ. ಏಕೆ ?

30. ಲೇವಾದೇವಿಗಾರರು ಕೃಷಿ ಹಣಕಾಸಿನಲ್ಲಿ ಪ್ರಮುಖ ಪಾತ್ರವಹಿಸುತ್ತಾರೆ. ಹೇಗೆ ?

31. ರೈತರು ದಲ್ಲಾಳಿಗಳು ಮತ್ತು ವ್ಯಾಪಾರಸ್ಥರಿಂದ ಹೇಗೆ ಶೋಷಿಸಲ್ಪಡುತ್ತಾರೆ ?

32. ಒಡೆತನದ ಆಧಾರದ ಮೇಲೆ ಕೈಗಾರಿಕೆಗಳ ವರ್ಗೀಕರಣವನ್ನು ತಿಳಿಸಿ.

33. 1991 ರ ಹೊಸ ಕೈಗಾರಿಕಾ ನೀತಿಯು ಭಾರತದ ಆರ್ಥಿಕ ಸ್ಥಿತಿಯನ್ನು ಬದಲಿಸಿತು. ಸಮರ್ಥಿಸಿ.

34. ಕೈಗಾರಿಕಾ ಎಸ್ಟೇಟ್‌ಗಳು ಒದಗಿಸುವ ಸೌಕರ್ಯಗಳನ್ನು ಪಟ್ಟಿ ಮಾಡಿ.

35. 20 ಅಂಶಗಳ ಕಾರ್ಯಕ್ರಮವನ್ನು ಏಕೆ ಜಾರಿಗೆ ತರಲಾಯಿತು ?

36. ಸ್ವರೂಪಕ್ಕೆ ಅನುಗುಣವಾಗಿ ವಿಂಗಡಿಸಲಾದ ರಸ್ತೆಗಳ ವಿಧಗಳನ್ನು ಹೆಸರಿಸಿ.

37. ಭಾರತೀಯ ರಿಸರ್ವ್ ಬ್ಯಾಂಕ್‌ನ ಪ್ರಕಟಣೆಗಳು ಯಾವುವು ?

38. ಭಾರತೀಯ ರಿಸರ್ವ್ ಬ್ಯಾಂಕ್‌ನ ಪ್ರಾದೇಶಿಕ ಕಛೇರಿಗಳನ್ನು ಎಲ್ಲಿ ಸ್ಥಾಪಿಸಲಾಗಿದೆ ?

39. ಭಾರತದ ಪ್ರಮುಖ ಆಮದುಗಳು ಯಾವುವು ?

40. ಭಾರತವು ಸೇವೆಗಳ ರಫ್ತಿನ ಬೆಳವಣಿಗೆಯಲ್ಲಿ ಮುಂಚೂಣಿಯಲ್ಲಿರುವಂತೆ ಮಾಡಿದ ಅಂಶಗಳು ಯಾವುವು ?

41. ಕಾಲಾವಧಿಯ ಆಧಾರದ ಮೇಲೆ ಕೃಷಿ ಹಣಕಾಸನ್ನು ಹೇಗೆ ವರ್ಗೀಕರಿಸಲಾಗಿದೆ ?

42. ಕೃಷಿ ಹಣಕಾಸಿನಲ್ಲಿ ಸಂಬಂಧಿಕರು ಮತ್ತು ಸ್ನೇಹಿತರ ಪಾತ್ರವೇನು ?

43. ಸಣ್ಣ ಪ್ರಮಾಣದ ಕೈಗಾರಿಕೆಯ ಲಕ್ಷಣಗಳನ್ನು ಬರೆಯಿರಿ.

44. ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆಯ ಕಾರ್ಯಗಳನ್ನು ತಿಳಿಸಿ.

45. ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಯೋಜನೆಯ ( DWCRA ) ಉದ್ದೇಶಗಳು ಯಾವುವು ?

46. ರಸ್ತೆ ಸಾರಿಗೆಯ ಸಮಸ್ಯೆಗಳು ಯಾವುವು ?

47. ರೈಲು ಸಾರಿಗೆಯ ಪ್ರಾಮುಖ್ಯತೆ. ಏನು ?

48. ಭಾರತದಲ್ಲಿ ಸ್ಥಾಪಿಸಲಾದ ಪ್ರಮುಖ ಹಡಗು ನಿರ್ಮಾಣ ಘಟಕಗಳನ್ನು ಹೆಸರಿಸಿ.

49. ಹಣಕಾಸು ಮೇಲ್ವಿಚಾರಣೆ ಮಂಡಳಿಯ ಪ್ರಮುಖ ಕಾರ್ಯಗಳು ಯಾವುವು ?

50. ಭಾರತೀಯ ರಿಸರ್ವ್ ಬ್ಯಾಂಕ್‌ನ ತರಬೇತಿ ಸಂಸ್ಥೆಗಳನ್ನು ತಿಳಿಸಿ.

**V. ಕೆಳಗಿನ ಪ್ರಶ್ನೆಗಳಿಗೆ ಮೂರರಿಂದ ಆರು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ :**

**6 × 3 = 18**

51. ಅಭಿವೃದ್ಧಿ ಹೊಂದಿದ ದೇಶಗಳ ಪ್ರಮುಖ ಲಕ್ಷಣಗಳನ್ನು ತಿಳಿಸಿ.

52. ಜಿಲ್ಲಾ ಕೈಗಾರಿಕಾ ಕೇಂದ್ರಗಳ ಕಾರ್ಯಗಳನ್ನು ಬರೆಯಿರಿ.

53. ಭಾರತದಲ್ಲಿನ ಬಡತನಕ್ಕೆ ಕಾರಣಗಳು ಯಾವುವು ?

54. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯು ಭಾರತದ ಪ್ರಮುಖ ಬಡತನ ನಿರ್ಮೂಲನಾ ಕಾರ್ಯಕ್ರಮವಾಗಿದೆ. ವಿವರಿಸಿ.

55. ಭಾರತೀಯ ರಿಸರ್ವ್ ಬ್ಯಾಂಕಿನ ಕಾರ್ಯಗಳೇನು ?

56. ಅಂತರ್‌ರಾಷ್ಟ್ರೀಯ ವ್ಯಾಪಾರದ ಅಗತ್ಯತೆಯನ್ನು ವಿವರಿಸಿ.

**VI. ಕೆಳಗಿನ ಪ್ರಶ್ನೆಗೆ ಎಂಟು ವಾಕ್ಯಗಳಲ್ಲಿ ಉತ್ತರಿಸಿ :** **1 × 4 = 4**

57. ಕೃಷಿ ಹಣಕಾಸಿನ ಅಗತ್ಯತೆಯನ್ನು ವಿವರಿಸಿ.